ಸಮುದ್ರ ಮಥನ



## ಮಾಹಿತಿಪೂರ್ಣ

'ಶನಿಯ ಅಂಗಳದಿ ವಾಸಕ್ಕೆ ಭೂಮಿ', ಎಂ. ಅಬ್ದುಲ್ ರೆಹಮಾನ್ ಪಾಷ ಅವರ ಮುಖಪುಟ ಲೇಖನ (ಸುಧಾ, ಜೂನ್ 15) ಮಾಹಿತಿಪೂರ್ಣವಾಗಿದೆ. ಶನಿ ಗ್ರಹದಲ್ಲಿ ಲಭ್ಯವಿರುವ ವಾತಾವರಣ, ಇತರೆ ಸಂಗತಿಗಳನ್ನು ಅಚ್ಚುಕಟ್ಟಾಗಿ ಭೌಗೋಳಿಕ ಅಂಕಿ ಅಂಶ ಸಮೇತ ವಿವರಿಸಿದ ಉತ್ತಮ ಲೇಖನ ಇದಾಗಿದೆ.

—ಮೀನಾಕ್ಷಿ ರಾಮಗುಂಡಿ ಬೈಲಹೊಂಗಲ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಬಿ.ಎಂ. ಶಿವಲಿಂಗೇಗೌಡ ಬೇವಿನಹಳ್ಳಿ

**ವಿಚಾರ ಲಹರಿ**

'ವಿಚಾರ ಲಹರಿ' ಯಲ್ಲಿ 'ಬಾಂಧವ್ಯದ ಹುಡುಕಾಟ' (ತೋಷ) ವಿಚಾರಶೀಲರನ್ನು ಚಿಂತನೆಯ ಒರೆಗೆ ಹಚ್ಚುವಂತಿದೆ.

—ಸುಂದರ್ ಬೆಂಗಳೂರು

**ಚಿಂತನಾರ್ಹ**

'ನಿಮ್ಮೊಡನೆ' ಯಲ್ಲಿ 'ಬಡರೋಗಿಗಳಿಗೆ ಜೆನೆರಿಕ್ ಸಂಜೀವಿನಿ' (ಬಿ.ಎಂ. ಹನೀಫ್) ಬರಹ ಚಿಂತನಾರ್ಹ. ಕೋಟಿಗಟ್ಟಲೆ ಡೊನೇಷನ್ ಕೊಟ್ಟು ಪದವಿ ಪಡೆದು ವೈದ್ಯರಾದವರಿಂದ ಎಂತಹ ಸೇವೆ ನಿರೀಕ್ಷಿಸಲು ಸಾಧ್ಯ? ನೈತಿಕತೆ ಎಂಬುದು ಮರೀಚಿಕೆಯಾಗಿ ಉಳಿಯುತ್ತದೆ.

—ಮಹಾವೀರ ಕಾಸರ ಶಿವಮೊಗ್ಗ

**ಸವಿನೆನಪು ಸೊಗಸಾಗಿದೆ**

'ಸವಿ ಸವಿ ನೆನಪು' ಅಂಕಣದಲ್ಲಿ ಪ್ರೊ.ಎಸ್.ಆರ್. ದೇವಪ್ರಕಾಶ ಅವರ ನೆನಪುಗಳ ಸರಮಾಲೆ ಬಹಳ ಚೆನ್ನಾಗಿದೆ.

—ಟಿ.ಆರ್.ಲಲಿತರಾವ್ ಬೆಂಗಳೂರು

**ಅರ್ಥಪೂರ್ಣ ಬರಹ**

ಪಾರ್ವತಮ್ಮ ಅವರ ಕುರಿತಾದ 'ಇನ್ನೊಬ್ಬ ಪಾರ್ವತಮ್ಮ ಹುಟ್ಟುವುದಿಲ್ಲ' (ಜಯಮಾಲಾ) ಹಾಗೂ 'ಅಮ್ಮ ಎಂದೂ ಬದಲಾಗಲಿಲ್ಲ' (ಶಿವರಾಜ್‌ಕುಮಾರ್) ಎರಡೂ ಬರಹಗಳು ಬಹಳ ಅರ್ಥಪೂರ್ಣವಾಗಿವೆ. ಪಾರ್ವತಮ್ಮ ಅವರ ಬಗ್ಗೆ ನಮಗೆ ಎಷ್ಟೋ ಕುತೂಹಲಕರ ಅಂಶಗಳು ತಿಳಿಯಿತು.

—ರವೀಂದ್ರನಾಥ ಶಿ. ಯಡಹಳ್ಳಿ, ಬಾಳ್ಳುಪೇಟೆ ನೀಲಕಂಠಪ್ಪ ಹಾಸನ, ಎಸ್. ಲಕ್ಷ್ಮೀನರಸಿಂಹ ಚಾಮರಾಜನಗರ, ಎಸ್.ಆನಂದಕುಮಾರ್ ಚಿತ್ರದುರ್ಗ, ಬಿ.ಎಂ.ಎಸ್. ಬೇವಿನಹಳ್ಳಿ, ಮುಕುಂದ ಹೆರಕಲ್ಲ ಕಲಬುರಗಿ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

**ತಲೆ ಕಸಿ (ವಿಸಿ)**

'ಬರಲಿದೆ ತಲೆ–ಕಸಿ' (ಡಾ.ಉದಯರವಿ ಶಾಸ್ತ್ರೀ) ಜನಸಾಮಾನ್ಯರ ತಲೆ ಬಿಸಿ ಮಾಡುವುದರಲ್ಲಿ ಸಂಶಯವಿಲ್ಲ. ಯಾವುದೇ ತಯಾರಿ ಇಲ್ಲದೆ ತಾನೇ ಕತ್ತರಿಸಿದ ತನ್ನ ಮಗನ ತಲೆಗೆ ಆನೆಯ ತಲೆಯನ್ನು ಕಸಿ ಮಾಡಿದ ಶಿವಪುರಾಣದ ಆ ಘಟನೆಗೆ ಇದೀಗ ಮರುಜೀವ ಬಂದಿದೆ. ಡಿಸೆಂಬರ್ ತಿಂಗಳಿನಲ್ಲಿ ನಡೆಯಬಹುದಾದ ಈ ಕಸಿಯ ಯಶಸ್ವಿನ ಬಗ್ಗೆ ಅನುಮಾನವಿದೆ.

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಮಧುರಾ ಸುಬ್ರಹ್ಮಣ್ಯ ಬೆಂಗಳೂರು

**ಸಮಯೋಚಿತ**

'ನೆಲ–ಜಲ ಮಲಿನಗೊಳಿಸದಿರಿ' (ಗುರಲಿಂಗಪ್ಪ ಅಂಕದ) ಲೇಖನ ಸಮಯೋಚಿತ. ಪರಿಸರ ಸಂರಕ್ಷಣೆ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸುವ, ಮುಂದಿನ ಜನಾಂಗಕ್ಕೆ ಜೀವಸಂಕುಲದ ಉಳಿವಿಗಾಗಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಲೇಖನ ಸಂಪೂರ್ಣ ಮಾಹಿತಿ ನೀಡಿದೆ.

—ಕೆ.ಪಿ. ರಾಮಗುಂಡಿ ಬೈಲಹೊಂಗಲ, ರಾಜಶೇಖರ ಹಾದಿಮನಿ ಧಾರವಾಡ, ಅಕ್ಷತಾ ಅಡಿಗ ಸಾಸ್ತಾನ, ಸವಿತಾ ಎಂ. ಚಿಗಟೇರಿ

**ಕಥೆ–ಕುತೂಹಲ**

ಕಥೆ 'ಸುಳಿವು' (ಎಸ್.ಬಿ. ಜೋಗುರ) ಸರಳವಾಗಿದ್ದು, ಕೊನೆಯುವರೆಗೂ ಕುತೂಹಲದಿಂದ ಓದಿಸಿಕೊಂಡು ಹೋಯಿತು.

—ಎಸ್.ವಿಜಯಕುಮಾರಿ ಬೆಂಗಳೂರು

**ಬಿಗಿ ಇರಲಿಲ್ಲ**

ಇಂದು ಬಹುತೇಕ ಪೊಲೀಸ್ ಠಾಣೆಗಳಲ್ಲಿ ಕಳ್ಳ–ಕೊಲೆಗಾರರ ಪತ್ತೆಯಲ್ಲಿ ನಿರಾಸಕ್ತಿ ತೋರುವ ರೀತಿಯನ್ನು ಕಥೆಗಾರ ಹೇಳಹೊರಟರೂ ಕಥೆಯಲ್ಲಿ ಬಿಗಿ ಇರಲಿಲ್ಲ.

—ಕೊಹಿಮ ಬಸರಕೋಡು

**ಪ್ರವಾಸ ಲೇಖನ**

'ಹಿಮಾಂಚಲದ ಹಳ್ಳಿ ಗ್ರಹಣ್' (ಬಿ.ಸೀತಾರಾಮ್ ಭಟ್) ಲೇಖನ ಚೆನ್ನಾಗಿದೆ. ಗ್ರಹಣ್‌ನಂತಹ ಹತ್ತಾರು ಹಳ್ಳಿಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ.

—ಕೋಟೇಶ್ವರ ಸೂರ್ಯನಾರಾಯಣರಾವ್

**ಶಿವವೀಣೆ ನಾದ**

'ನಾದಾಮೃತ ನೀಡುವ ಶಿವವೀಣೆ' (ಉಮಾ ಅನಂತ್) ಲೇಖನದಲ್ಲಿ ತಿಳಿಸಿದಂತೆ ಶಿವವೀಣೆ ಆವಿಷ್ಕಾರ ಮಾಡಿದ್ದು ರಷ್ಯಾದ ಎಂಜಿನಿಯರ್ ಡೆನಿಸ್ ಪೆಟ್ರೊವ್ ಹಾಗೂ ಇದರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ನುಡಿಸುತ್ತಾರೆ ಎಂಬುದು ಕೇಳಿ ಅಚ್ಚರಿಗೊಂಡೆ. ಜತೆಗೆ ಶಿವ ವೀಣಾ ವಾದನ ಕೇಳುವ ಹಂಬಲ ಉಂಟಾಯಿತು.

—ನಾರಾಯಣಯಾಜಿ ಶಿರಾಲಿ

**ವಸ್ತ್ರಸಂಹಿತೆ**

'ಸೆಲೆಬ್ರಿಟಿ' ಅಂಕಣದಲ್ಲಿ 'ಪ್ರಿಯಾಂಕಾ ಡ್ರೆಸ್‌ಕೋಡ್' (ಹನಿ) ಅವರ ಅಭಿಪ್ರಾಯ ಪ್ರಶಂಸಾರ್ಹ. ವಸ್ತ್ರಸಂಹಿತೆ ಎಂಬುದು ಈ ದೇಶದಲ್ಲಿ ಆಗಾಗ ಪ್ರಸ್ತಾಪವಾಗುವ ಅನಗತ್ಯ ವಿಷಯ.

—ಬಂಟ್ವಾಳ ಸೂರ್ಯನಾರಾಯಣರಾವ್




ನಂ.1 ವಶೀಕರಣ ಮೋಡಿಗಾರರು



ಪಂಡಿತ್ ಸಾಯಿನಾಥರಾವ್ (ಕುಡ್ಲ)

ಸಮಸ್ಯೆಯನ್ನು ನೋಡಿ ಕರುಣೆ ತೋರಿಸುವುದು ಮನುಷ್ಯತ್ವ ಅದೇ ಸಮಸ್ಯೆಗೆ ಪರಿಹಾರ ನೀಡುವುದು ದೈವತ್ವ.

ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮೋಡಿಗಾರರು

ಎಲ್ಲಾ ಸಮಸ್ಯೆಗಳಿಗೆ ಫೋನಿನ ಮೂಲಕ 100ಕ್ಕೆ 101 ರಷ್ಟು ಪರಿಹಾರ ಶತಸಿದ್ಧ.

ನಿಮ್ಮ ಸಂಕಷ್ಟಗಳಾದ ಉದ್ಯೋಗದಲ್ಲಿ ಅಡೆತಡೆ, ಮಾನಸಿಕ ಅಶಾಂತಿ, ವಾಸ್ತುದೋಷ, ಕುಜದೋಷ, ಮಕ್ಕಳ ಸಮಸ್ಯೆ, ಪ್ರೇಮವಿಚಾರ, ಮನಇಚ್ಛಾ ವಶೀಕರಣ, ಮಾಟಮಂತ್ರ ತಡೆ, ಶತ್ರುಕಾಟ, ರಾಜಕೀಯ, ಕೋರ್ಟ್‌ಕೇಸ್, ಜನವಶ, ಲಕ್ಷ್ಮೀವಶ, ಕಾರ್ಯಸಿದ್ಧಿ, ಇನ್ನಿತರ ನಿಮ್ಮ ಎಷ್ಟೇ ಕಠಿಣ ಸಮಸ್ಯೆಗಳಿಗೂ ಖಚಿತವಾದ ಪರಿಹಾರ. ಚಿಂತಿಸುವ ಅವಶ್ಯಕತೆ ಇಲ್ಲ ಒಂದು ಫೋನ್‌ಕಾಲ್‌ನಿಂದ ನಿಮ್ಮ ಜೀವನ ಬದಲಾಗುತ್ತದೆ. ಇವರು ನಿಮ್ಮ ನಗರದಲ್ಲಿ ಖಾಯಂ ಆಗಿ ನೆಲೆಸಿದ್ದಾರೆ.

ವಿಶೇಷ ಸೂಚನೆ: ಮಾಟಮಂತ್ರ, ವಿದೇಶ ಪ್ರಯಾಣ, ಲೈಂಗಿಕ ಸಮಸ್ಯೆ, ಶತ್ರುಗಳ ನಾಶ, ಹಾಗೂ ಹಲವಾರು, ಸಮಸ್ಯೆಗಳಿಗೆ ಅಷ್ಟದಿಗ್ಬಂಧನ ಶಕ್ತಿ ತಾಂತ್ರಿಕ, ಮಾಂತ್ರಿಕ ಶಕ್ತಿ ಹಾಗೂ ಸರ್ವ ದೈವಶಕ್ತಿಗಳ ಮೂಲಕ

ಕೇವಲ 5 ದಿನಗಳಲ್ಲಿ ಪರಿಹಾರ ಶತಸಿದ್ಧ

ನೀವು ಇಷ್ಟಪಟ್ಟವರು ನಿಮ್ಮಂತೆ ಆಗಲು ಯಾರಿಂದಲೂ ಆಗದ ಕೆಲಸ ಕೆಲವೇ ಗಂಟೆಗಳಲ್ಲಿ ಸಾಧ್ಯ. ಗುಪ್ತ ನಿಗೂಢ ಸಮಸ್ಯೆಗಳೇನೆ ಇರಲಿ ತಕ್ಷಣದಲ್ಲಿ ಪರಿಹಾರ ಸೂಚಿಸುತ್ತಾರೆ.

ಸ್ತ್ರೀ ಪುರುಷ ವಶೀಕರಣಕ್ಕೆ ಮದನಸಮ್ಮೋಹಿನಿ ಯಂತ್ರ ಮಾಡಿಕೊಡಲಾಗುವುದು.

ಶ್ರೀ ಶಕ್ತಿಮಹಾಗಣಪತಿ ಜ್ಯೋತಿಷ್ಯಾಲಯ

ಖಾಯಂ ವಿಳಾಸ: 16ನೇ ಕ್ರಾಸ್, ಸಿದ್ಧಾಶ್ರಮ ಪಕ್ಕ, ಬ್ರಾಹ್ಮಣ ಕಾಫಿಬಾರ್ (ಅಡಿಗಾಸ್ ಹೋಟೆಲ್) ಪಕ್ಕ, ಬಡಗನಾಡು ಭವನದ ಎದುರು, ಸಂಪಿಗೆರಸ್ತೆ, ಮಲ್ಲೇಶ್ವರಂ, ಬೆಂಗಳೂರು

9972555709